The Mangalore Catholic Co-operative Bank Ltd
**Administrative Office**: M.C.C. Bank Building,
Hampankatta, Mangalore-575 001.

# ನೇಮಕಾತಿ ಪ್ರಕಟಣೆ

ಮಂಗಳೂರು ಕಥೋಲಿಕ್ ಕೋಆಪರೇಟಿವ್ ಬ್ಯಾಂಕ್ ನಿ, ಮಂಗಳೂರು ಇಲ್ಲಿ ಖಾಲಿ ಇರುವ ಈ ಕೆಳಕಂಡ 50 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಖುದ್ದಾಗಿ/ಅಂಚೆ/ಕೊರಿಯರ್ ಮೂಲಕ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭದ ದಿನಾಂಕ 12.03.2024ರಿಂದ ದಿನಾಂಕ 26.03.2024ರ ಸಂಜೆ 5.00 ಗಂಟೆಯೊಳಗೆ ಇರುತ್ತದೆ.

ನೇರ ನೇಮಕಾತಿಗೆ ಹೊರಡಿಸಲಾಗಿರುವ ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ.

## 1. ಹುದ್ದೆಯ ವಿವರ

| ಕ್ರಮ ಸಂಖ್ಯೆ | ಹುದ್ದೆಯ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ಹಿರಿಯ ಪ್ರಬಂಧಕರು/ Senior Manager | 2 |
| 2 | ಶಾಖಾ ಪರಿವೀಕ್ಷಕರು/ Branch Inspector | 1 |
| 3 | ವಸೂಲಾತಿ ಅಧಿಕಾರಿ/ Recovery Officer | 1 |
| 4 | ಶಾಖಾ ವ್ಯವಸ್ಥಾಪಕರು Branch Manager | 2 |
| 5 | ಸುಪರ್‌ವೈಸರ್ Supervisor | 1 |
| 6 | ಮುಖ್ಯ ಅಕೌಂಟೆಂಟ್ Chief Accountant | 1 |
| 7 | ಅಕೌಂಟೆಂಟ್ Accountant | 5 |
| 8 | ಡೇಟಾಬೇಸ್ ಅಡ್ಮಿನಿಸ್ಟ್ರೇಟರ್ DBA | 2 |
| 9 | ಕಿರಿಯ ಅಧಿಕಾರಿ Junior Officer | 10 |
| 10 | ಹಿರಿಯ ಸಹಾಯಕ Senior Assistant | 8 |
| 11 | ಕಿರಿಯ ಸಹಾಯಕ Junior Assistant | 13 |
| 12 | ಅಟೆಂಡರ್/ಡ್ರೈವರ್ Attender/Driver | 4 |
| | ಒಟ್ಟು ಹುದ್ದೆಗಳು Total | **50** |

## 2. ವೇತನ ಶ್ರೇಣಿ:

| **ಕ್ರಮ ಸಂಖ್ಯೆ** | **ಹುದ್ದೆಯ ವಿವರ** | **ವೇತನ ಶ್ರೇಣಿ** |
|---|---|---|
| 1 | ಹಿರಿಯ ಪ್ರಬಂಧಕರು Senior Manager | 30400-800-33600-900-39000-1050-45300-1200-51300 |
| 2 | ಶಾಖಾ ಪರಿವೀಕ್ಷಕರು Branch Inspector | 30400-800-33600-900-39000-1050-45300-1200-51300 |
| 3 | ವಸೂಲಾತಿ ಅಧಿಕಾರಿ Recovery Officer | 30400-800-33600-900-39000-1050-45300-1200-51300 |
| 4 | ಶಾಖಾ ವ್ಯವಸ್ಥಾಪಕರು Branch Manager | 28100-700-28800-800-33600-900-39000-1050-45300-1200-50100 |
| 5 | ಸುಪರ್‌ವೈಸರ್ Supervisor | 28100-700-28800-800-33600-900-39000-1050-45300-1200-50100 |
| 6 | ಮುಖ್ಯ ಅಕೌಂಟೆಂಟ್ Chief Accountant | 28100-700-28800-800-33600-900-39000-1050-45300-1200-50100 |
| 7 | ಅಕೌಂಟೆಂಟ್ Accountant | 26000-700-28800-800-33600-900-39000-1050-45300-1200-47700 |

| | | |
|---|---|---|
| 8 | ಡೇಟಾಬೇಸ್ ಅಡ್ಮಿನಿಸ್ಟ್ರೇಟರ್<br>DBA | 26000-700-28800-800-33600-900-39000-1050-45300-1200-47700 |
| 9 | ಕಿರಿಯ ಅಧಿಕಾರಿ<br>Junior Officer | 24000-600-24600-700-28800-800-33600-900-39000-1050-45300 |
| 10 | ಹಿರಿಯ ಸಹಾಯಕ<br>Senior Assistant | 21600-600-24600-700-28800-800-33600-900-39000-1050-40050 |
| 11 | ಕಿರಿಯ ಸಹಾಯಕ<br>Junior Assistant | 20000-500-21000-600-24600-700-28800-800-33600-900-36300 |
| 12 | ಅಟೆಂಡರ್/ಡ್ರೈವರ್<br>Attender/Driver | 16000-400-17200-450-19000-500-21000-600-24600-700-28800-800-29600 |

ವೇತನ ಶ್ರೇಣಿಯ ಜೊತೆಗೆ ನಿಯಮನುಸಾರವಾಗಿ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ಪ್ರಾವಿಡೆಂಡ್ ಫಂಡ್, ಗ್ರಾಚ್ಯೂಟಿ ಇತ್ಯಾದಿ ಸೌಲಭ್ಯಗಳನ್ನು ನೀಡಲಾಗುವುದು.

**3. ವಿದ್ಯಾರ್ಹತೆ:**

| ಕ್ರ. ಸಂಖ್ಯೆ | ಹುದ್ದೆಯ ವಿವರ | ನಿಗದಿಪಡಿಸಿದ ವಿದ್ಯಾರ್ಹತೆ |
|---|---|---|
| 1 | ಹಿರಿಯ ಪ್ರಬಂಧಕರು<br>Senior Manager | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ:**<br>1)ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು.<br>3) ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.<br>4)HDCM/DCBM/DUCBM/GDC/DCM ತಾಂತ್ರಿಕ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. |
| 2 | ಶಾಖಾ ಪರಿವೀಕ್ಷಕರು<br>Branch Inspector | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ:**<br>1)ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು.<br>3) ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.<br>4) HDCM/DCBM/DUCBM/GDC/DCM ತಾಂತ್ರಿಕ ಪದವಿ ಹೊಂದಿದವರಿಗೆ ಹಾಗೂ ಬ್ಯಾಂಕಿಂಗ್ ಪರಿವೀಕ್ಷಣಾ ಅನುಭವ ಹೊಂದಿದವರಿಗೆ ಆದ್ಯತೆ. |
| 3 | ವಸೂಲಾತಿ ಅಧಿಕಾರಿ<br>Recovery Officer | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ:**<br>1) ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು |

| | | |
|---|---|---|
| | | ತಂತ್ರಜ್ಞಾನದ ಅನುಭವವಿರತಕ್ಕದ್ದು.<br>3) ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.<br>4) HDCM/DCBM/DUCBM/GDC/DCM ತಾಂತ್ರಿಕ ತರಭೇತಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. |
| 4 | ಶಾಖಾ ವ್ಯವಸ್ಥಾಪಕರು<br>Branch Manager | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ:**<br>1) ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು.<br>3) ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.<br>4)HDCM/DCBM/DUCBM/GDC/DCM ತಾಂತ್ರಿಕ ತರಭೇತಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. |
| 5 | ಸುಪರ್‌ವೈಸರ್<br>Supervisor | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ವಿಷಯದಲ್ಲಿ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ:**<br>1) ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು.<br>3) ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. |
| 6 | ಮುಖ್ಯ ಅಕೌಂಟೆಂಟ್<br>Chief Accountant | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ವಾಣಿಜ್ಯ/ಸಹಕಾರ/ ಮ್ಯಾನೆಜ್‌ಮೆಂಟ್ ವಿಷಯಗಳಲ್ಲಿ ಪದವಿ ಹೊಂದಿರಬೇಕು ಹಾಗೂ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ:**<br>1) ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ/ಹಿರಿಯ ಶ್ರೇಣಿಯಲ್ಲಿ ಕನಿಷ್ಟ 5 ವರ್ಷಗಳ ಸೇವಾ ಅನುಭವವಿರತಕ್ಕದ್ದು.<br>2) ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇತ್ತೀಚಿನ ಮಾಹಿತಿ ಮತ್ತು ತಂತ್ರಜ್ಞಾನದ ಅನುಭವವಿರತಕ್ಕದ್ದು.<br>3) ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. |
| 7 | ಅಕೌಂಟೆಂಟ್<br>Accountant | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ವಾಣಿಜ್ಯ/ಸಹಕಾರ/ ಮ್ಯಾನೆಜ್‌ಮೆಂಟ್ ವಿಷಯಗಳಲ್ಲಿ ಪದವಿ ಹೊಂದಿರಬೇಕು ಹಾಗೂ Tally ಕೋರ್ಸ್‌ನಲ್ಲಿ ತೇರ್ಗಡೆಯಾದ ಪ್ರಮಾಣ ಪತ್ರದ ಜೊತೆಗೆ ಕಂಪ್ಯೂಟರ್ ಆಪರೇಶನ್ ಮತ್ತು ಅಪ್ಲಿಕೇಶನ್ ಜ್ಞಾನ ಹೊಂದಿರಬೇಕು.<br>**ಅನುಭವ :** ಬ್ಯಾಂಕಿಂಗ್ ವಲಯದಲ್ಲಿ ಮಧ್ಯಮ ಶ್ರೇಣಿಯಲ್ಲಿ ಕನಿಷ್ಠ 3 ವರ್ಷ ಕೆಲಸ ಮಾಡಿದವರಿಗೆ ಆಧ್ಯತೆ.<br>ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ |

| | | |
|---|---|---|
| 8 | ಡೇಟಾಬೇಸ್ ಅಡ್ಮಿನಿಸ್ಟ್ರೇಟರ್ DBA | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಗಣಕ ವಿಜ್ಞಾನದಲ್ಲಿ B.E ಪದವಿ ಅಥವಾ ಕಂಪ್ಯೂಟರ್ ಅಪ್ಲಿಕೇಶನಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು ಮತ್ತು ಬ್ಯಾಂಕಿಂಗ್ ವಲಯದ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದಲ್ಲಿ 5 ವರ್ಷಗಳು ಕಾರ್ಯ ನಿರ್ವಹಿಸಿದ ಅನುಭವವಿರತಕ್ಕದ್ದು. |
| 9 | ಕಿರಿಯ ಅಧಿಕಾರಿ Junior Officer | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ ಹೊಂದಿರಬೇಕು (ಬಿಎಸ್ಸಿ/ಬಿಎ/ಬಿಕಾಂ/ಎಂಕಾಂ/ಬಿಇ/ಬಿಬಿಎಮ್/ಬಿಸಿಎ/ಎಮ್‌ಸಿಎ,ಎಂ.ಬಿ.ಎ ಇತ್ಯಾದಿ) ಹಾಗೂ ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್‌ನಲ್ಲಿ ಅಗತ್ಯ ಪರಿಣತಿ ಹೊಂದಿರಬೇಕು.<br>**ಅನುಭವ :** ಬ್ಯಾಂಕಿಂಗ್ ವಲಯದಲ್ಲಿ ಕೆಲಸ ಮಾಡಿದವರಿಗೆ ಆಧ್ಯತೆ. ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್‌ನಲ್ಲಿ ಅಗತ್ಯ ಪರಿಣತಿ ಹೊಂದಿರಬೇಕು.<br>ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ |
| 10 | ಹಿರಿಯ ಸಹಾಯಕ Senior Assistant | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ ಹೊಂದಿರಬೇಕು (ಬಿಎಸ್ಸಿ/ಬಿಎ/ಬಿಕಾಂ/ಎಂಕಾಂ/ಬಿಇ/ಬಿಬಿಎಮ್/ಬಿಸಿಎ/ಎಮ್‌ಸಿಎ,ಇತ್ಯಾದಿ) ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್‌ನಲ್ಲಿ ಅಗತ್ಯ ಪರಿಣತಿ ಹೊಂದಿರಬೇಕು. |
| 11 | ಕಿರಿಯ ಸಹಾಯಕ Junior Assistant | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ ಹೊಂದಿರಬೇಕು (ಬಿಎಸ್ಸಿ/ಬಿಎ/ಬಿಕಾಂ/ಎಂಕಾಂ/ಬಿಇ/ಬಿಬಿಎಮ್/ಬಿಸಿಎ/ಎಮ್‌ಸಿಎ,ಇತ್ಯಾದಿ) ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್‌ನಲ್ಲಿ ಅಗತ್ಯ ಪರಿಣತಿ ಹೊಂದಿರಬೇಕು. |
| 12 | ಅಟೆಂಡರ್/ಡ್ರೈವರ್ Attender/Driver | ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿರಬೇಕು ಮತ್ತು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.<br>ಡ್ರೆವರ್ ಹುದ್ದೆಗೆ ಅರ್ಜಿ ಸಲ್ಲಿಸುವವರಿಗೆ ಚಾಲನಾ ಪರವಾನಿಗೆ (LMV) ಕಡ್ಡಾಯ |

**4. ವಯೋಮಿತಿ:**

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳನ್ವಯ ಈ ಕೆಳಕಂಡ ಗರಿಷ್ಟ ವಯೋಮಿತಿಗೊಳಪಟ್ಟಿರಬೇಕು.

1. ಅಭ್ಯರ್ಥಿಯು ಯಾವುದೇ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ವರ್ಗ–1ಕ್ಕೆ ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ನಲವತ್ತು ವರ್ಷ;
2. ಅಭ್ಯರ್ಥಿಯು ಹಿಂದುಳಿದ ಜಾತಿ ಅಥವಾ ಪಂಗಡಕ್ಕೆ (2ಎ, 2ಬಿ, 3ಎ ಮತ್ತು 3ಬಿ) ಸೇರಿದ ಅಭ್ಯರ್ಥಿಯ ಸಂಬಂಧದಲ್ಲಿ – ಮೂವತ್ತೆಂಟು ವರ್ಷ;
3. ಉಳಿದ ಅಭ್ಯರ್ಥಿಯ ಸಂಬಂಧದಲ್ಲಿ(ಸಾಮಾನ್ಯ ವರ್ಗ) – ಮೂವತ್ತೈದು ವರ್ಷ.

**5. ಅರ್ಜಿ ಸಲ್ಲಿಸುವ ವಿಧಾನ:**

1. ಅರ್ಜಿ ನಮೂನೆಯನ್ನು ಬ್ಯಾಂಕಿನ ವೆಬ್‌ಸೈಟ್‌ನಿಂದ (Website: www.mccbank.in) ಡೌನ್‌ಲೋಡ್ ಮಾಡಿ, ಭರ್ತಿ ಮಾಡತಕ್ಕದ್ದು.

2. ಹೆಚ್ಚಿನ ವಿವರಗಳಿಗೆ ಬ್ಯಾಂಕಿನ ಫೋನ್ ನಂಬ್ರ 0824–2445746 ಗೆ ಸಂಪರ್ಕಿಸಬಹುದು.

**6. ಅರ್ಜಿ ಶುಲ್ಕ**

(i) ಕ್ರ. ಸಂ.1 ರಿಂದ 11 ರವರೆಗಿನ ಹುದ್ದೆಗಳಿಗೆ ರೂ.1,000/– (ರೂಪಾಯಿ ಒಂದು ಸಾವಿರ ಮಾತ್ರ)

(ii) ಅಟೆಂಡರ್/ಡ್ರೈವರ್ ಹುದ್ದೆಗಳಿಗೆ ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ವರ್ಗ–1 ಅಭ್ಯರ್ಥಿಗಳಿಗೆ ರೂ. 500/– (ರೂಪಾಯಿ ಐನೂರು ಮಾತ್ರ)

(iii) ಅರ್ಜಿ ಶುಲ್ಕವನ್ನು **"ಮಂಗಳೂರು ಕಥೋಲಿಕ್ ಕೊ–ಆಪರೇಟಿವ್ ಬ್ಯಾಂಕ್ ನಿ.,"** (The Mangalore Catholic Co.operative Bank Ltd) ಇವರ ಹೆಸರಿಗೆ ಡಿ.ಡಿ. ಮುಖಾಂತರ ಪಾವತಿಸತಕ್ಕದ್ದು.

**7. ಆಯ್ಕೆ ವಿಧಾನ**

**ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ:**

**1) ಹಿರಿಯ ಪ್ರಬಂಧಕರು , ಶಾಖಾ ಪರಿವೀಕ್ಷಕರು, ವಸೂಲಾತಿ ಅಧಿಕಾರಿ, ಶಾಖಾ ವ್ಯವಸ್ಥಾಪಕರು, ಸುಪರ್‌ವೈಸರ್, ಮುಖ್ಯ ಅಕೌಂಟೆಂಟ್, ಅಕೌಂಟೆಂಟ್, ಕಿರಿಯ ಅಧಿಕಾರಿ, ಹಿರಿಯ ಸಹಾಯಕ ಹಾಗೂ ಕಿರಿಯ ಸಹಾಯಕ (Senior Manager, Branch Inspector, Recovery Officer, Branch Manager, Supervisor, Chief Accountant, Accountantant, Junior Officer, Senior Assistant and Junior Assistant)**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಆಂಗ್ಲ ಭಾಷೆಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗೆ 50 ಅಂಕಗಳು ಮತ್ತು ಭಾರತ ಸಂವಿಧಾನ ವಿಷಯಕ್ಕೆ 25 ಅಂಕಗಳು ಮತ್ತು ಬ್ಯಾಂಕಿನ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಕ್ಕೆ 25 ಅಂಕಗಳನ್ನು ಒಳಗೊಂಡಿರುತ್ತದೆ.

ಈ ಮೇಲಿನ ಹುದ್ದೆಗಳಿಗೆ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.85ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಜೊತೆಗೆ ಮೌಖಿಕ ಸಂದರ್ಶನಕ್ಕೆ ಗರಿಷ್ಟ 15 ಅಂಕಗಳನ್ನು ನಿಗದಿಪಡಿಸಿದ್ದು, ಸಂದರ್ಶನದಲ್ಲಿ ಗಳಿಸಿದ ಅಂಕಗಳು ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೂಡಿಸಿ ಈ ಅಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

**2) ಡೇಟಾಬೇಸ್ ಅಡ್ಮಿನಿಸ್ಟ್ರೇಟರ್ (DBA)**

200 ಅಂಕಗಳ ಲಿಖಿತ ಪರೀಕ್ಷೆ ಇದ್ದು ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಆಂಗ್ಲ ಭಾಷೆಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು ಮತ್ತು ಕಂಪ್ಯೂಟರ್/ ಮಾಹಿತಿ ತಂತ್ರಜ್ಞಾನ/ಬ್ಯಾಂಕಿಂಗ್ ತಂತ್ರಜ್ಞಾನ ಪರೀಕ್ಷೆಗೆ 100 ಅಂಕಗಳನ್ನು ಒಳಗೊಂಡಿರುತ್ತದೆ.

ಈ ಮೇಲಿನ ಹುದ್ದೆಗೆ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.85ಕ್ಕೆ ಇಳಿಸಿ ಪ್ರಾಪ್ತವಾಗುವ ಅಂಕಗಳ ಜೊತೆಗೆ ಮೌಖಿಕ ಸಂದರ್ಶನಕ್ಕೆ ಗರಿಷ್ಟ 15 ಅಂಕಗಳನ್ನು ನಿಗದಿಪಡಿಸಿದ್ದು, ಸಂದರ್ಶನದಲ್ಲಿ ಗಳಿಸಿದ ಅಂಕಗಳು ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೂಡಿಸಿ ಈ ಆಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

**3) ಅಟೆಂಡರ್/ಡ್ರೈವರ್ (Attender/Driver)**

ಈ ಮೇಲಿನ ಹುದ್ದೆಯ ನೇಮಕಾತಿಗಾಗಿ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಪರೀಕ್ಷೆಯಲ್ಲಿ ಅವರು ಪಡೆದ ಅಂಕದ ಆಧಾರದ ಮೇಲೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ವಿದ್ಯಾರ್ಹತೆ (SSLC) ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿ ಸಂದರ್ಶನಕ್ಕೆ ಗರಿಷ್ಟ 15 ಅಂಕಗಳನ್ನು ನಿಗದಿಪಡಿಸಿದ್ದು, ವಿದ್ಯಾರ್ಹತೆ (SSLC) ಪರೀಕ್ಷೆಯಲ್ಲಿ ಗಳಿಸಿದ

ಅಂಕಗಳನ್ನು ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಒಟ್ಟುಗೂಡಿಸಿ ಈ ಆಧಾರದ ಮೇಲೆ ಯಶಸ್ವಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

**8. ಸೂಚನೆಗಳು ಹಾಗೂ ಅರ್ಹತಾ ಷರತ್ತುಗಳು:**

1) ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಪ್ರವೇಶ ಪತ್ರ ಹಾಗೂ ಲಿಖಿತ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು. ಅರ್ಹ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಪ್ರವೇಶ ಪತ್ರ (Hall Ticket) ಗಳನ್ನು ಅಂಚೆ ಮೂಲಕ/ಅಭ್ಯರ್ಥಿಗಳು ನೀಡಿರುವ ಇಮೇಲ್ ಮುಖಾಂತರ ಕಳುಹಿಸಲಾಗುವುದು. ಪ್ರವೇಶ ಪತ್ರವನ್ನು ಲಿಖಿತ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಲಿಖಿತ ಪರೀಕ್ಷೆಗೆ/ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದಲೇ ಹಾಜರಾಗತಕ್ಕದ್ದು.

2) ಅಭ್ಯರ್ಥಿಗಳು ಪದವಿಯ ಎಲ್ಲಾ ಸೆಮಿಸ್ಟರ್/ವರ್ಷವಾರುಗಳ ಕ್ರೋಢೀಕೃತ ಅಂಕಗಳ ಶೇಕಡವಾರು ಆಧಾರದ ಮೇಲೆ ಪ್ರತಿಶತ ಪರಿಗಣಿಸಲಾಗುವುದು, ಆದುದರಿಂದ ಸೆಮಿಸ್ಟರ್/ವರ್ಷಗಳ ಎಲ್ಲಾ ಅಂಕಪಟ್ಟಿ ಪ್ರತಿಗಳನ್ನು ಲಗತ್ತಿಸಬೇಕು.

3) ಅಭ್ಯರ್ಥಿಗಳಿಗೆ ಕನ್ನಡದಲ್ಲಿ ವ್ಯವಹಾರದ ಜ್ಞಾನ, ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಬರಬೇಕು.

4) ಅಭ್ಯರ್ಥಿಗಳು ಭಾರತೀಯ ನಾಗರೀಕರಾಗಿದ್ದು, ಕರ್ನಾಟಕದಲ್ಲಿ ಕನಿಷ್ಟ 10 ವರ್ಷ ವಾಸವಾಗಿರತಕ್ಕದ್ದು.

5) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನು ಉಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತವಾಗಿರಬೇಕು. ಯೋಗ್ಯ ಹಾಗೂ ಸೂಕ್ತವಾದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ.

<u>6) ಅಪೂರ್ಣವಾಗಿರುವ, ಸಹಿ ಮಾಡದೇ ಇರುವ, ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸದ, ಮೂಲ ಡಿ.ಡಿ ಯನ್ನು ಲಗತ್ತಿಸದ, ಸ್ಪಷ್ಟ ಮಾಹಿತಿಗಳನ್ನು ನೀಡದ ಮತ್ತು ತಪ್ಪು ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ತಿಳುವಳಿಕೆ ನೀಡದೆ ತಿರಸ್ಕರಿಸಲಾಗುವುದು.</u>

<u>7) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕ-ಪ್ರತ್ಯೇಕ ಅರ್ಜಿ ಸಲ್ಲಿಸಿ, ಪ್ರತ್ಯೇಕವಾಗಿ ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.</u>

<u>8) ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.</u>

9) ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

10) ಕೋಷ್ಟಕದಲ್ಲಿ ನಮೂದಿಸಿರುವ ಆಯಾ ಹುದ್ದೆಗೆ ಸಂಬಂಧಪಟ್ಟ ಸೇವಾ ಅನುಭವದ ದೃಢೀಕರಣ ಪತ್ರವನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

11) ಬ್ಯಾಂಕಿನ ಕಾರ್ಯವ್ಯಾಪ್ತಿಯಲ್ಲಿ ಯಾವುದೇ ಶಾಖೆಯಲ್ಲಿ ಕಾರ್ಯ ನಿರ್ವಹಿಸಲು ಬದ್ಧರಿರತಕ್ಕದ್ದು.

12) ಅಭ್ಯರ್ಥಿಗಳ ಅರ್ಹತೆ ಬಗ್ಗೆ ಬ್ಯಾಂಕಿನ ನೇಮಕಾತಿ ಪ್ರಾಧಿಕಾರದ ನಿರ್ಣಯವೇ ಅಂತಿಮ ಎಂದು ಪರಿಗಣಿಸಲಾಗುವುದು ಇದಕ್ಕೆ ಅಭ್ಯರ್ಥಿ ಬದ್ಧನಾಗಿರಬೇಕು. ಈ ನೇಮಕಾತಿ ಪ್ರಕಟಣೆಯನ್ನು ಕಾರಣಾಂತರಗಳಿಂದಾಗಿ ರದ್ದು ಪಡಿಸುವ ಅಧಿಕಾರವನ್ನು ಬ್ಯಾಂಕಿನ ಆಡಳಿತ ಮಂಡಳಿ ಹೊಂದಿರುತ್ತದೆ.

13) ಆಯ್ಕೆಗೊಂಡ ಅಭ್ಯರ್ಥಿಗಳನ್ನು ಪ್ರಾರಂಭದಲ್ಲಿ ಎರಡು ವರ್ಷಗಳ ಕರಾರು ಪತ್ರದ ಜೊತೆಗೆ ಪರೀಕ್ಷಾರ್ಥ ಅವಧಿಗೆ ನೇಮಕಾತಿ ಮಾಡಲಾಗುವುದು. ಅವಶ್ಯಕವಿದ್ದಲ್ಲಿ ಪರೀಕ್ಷಾರ್ಥ ಅವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾರ್ಥ ಅವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಸೇವೆಯನ್ನು ಖಾಯಂಗೊಳಿಸಲಾಗುವುದು ಹಾಗೂ ಅಗತ್ಯ ಸಂದರ್ಭದಲ್ಲಿ ಬ್ಯಾಂಕಿನ ವ್ಯವಹಾರ ಸೇವಾ ಯೋಜನೆಗಳ ಪ್ರಚಾರ ಕಾರ್ಯಗಳಲ್ಲಿ ಭಾಗಿಯಾಗಲು ಬದ್ಧರಿರತಕ್ಕದ್ದು.

14) ಅರ್ಜಿ ಸಲ್ಲಿಸಲು ಜಾಹಿರಾತಿನಲ್ಲಿ ಪ್ರಕಟಿಸಿದ ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ವಯೋಮಿತಿ ಮೀರಿರಬಾರದು.

15) ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಥವಾ ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಯಾದ ಮಾತ್ರಕ್ಕೆ ಅಭ್ಯರ್ಥಿಗಳು ನೇಮಕಾತಿ ಹಕ್ಕನ್ನು ಪಡೆದುಕೊಳ್ಳುವುದಿಲ್ಲ. ನೇಮಕಾತಿಯು ಯಾವುದೇ ಹಂತದಲ್ಲಿ ಅನರ್ಹತೆಯ ಕಾರಣದಿಂದಾಗಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸುವ ಅಥವಾ ಇತರ ಆಡಳಿತಾತ್ಮಕ ಕಾರಣಗಳಿಂದಾಗಿ ನೇಮಕಾತಿಯನ್ನು ರದ್ದುಗೊಳಿಸುವ ಅಧಿಕಾರವನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ. ಮೇಲಿನ ಯಾವುದೇ ವಿಚಾರಗಳಲ್ಲಿ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

16) ಮುಚ್ಚಿದ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಿರೋ ಆ ಹುದ್ದೆಯ ಹೆಸರನ್ನು ನಮೂದಿಸಿ ಮಹಾಪ್ರಬಂಧಕರು, ಮಂಗಳೂರು ಕಥೋಲಿಕ್ ಕೋಆಪರೇಟಿವ್ ಬ್ಯಾಂಕ್ ನಿ, ಆಡಳಿತ ಕಛೇರಿ, ಎರಡನೇ ಮಹಡಿ, ಹಂಪನಕಟ್ಟ ಮಂಗಳೂರು–575001 ಇಲ್ಲಿಗೆ ಸಲ್ಲಿಸುವುದು. ಸಾರ್ವತ್ರಿಕ ಬ್ಯಾಂಕ್ ರಜಾ ದಿನಗಳನ್ನು ಹೊರತುಪಡಿಸಿ, ಬ್ಯಾಂಕ್ ವ್ಯವಹಾರದ ಸಮಯದಲ್ಲಿ ಅರ್ಜಿಗಳನ್ನು ಖುದ್ದಾಗಿ ಸ್ವೀಕರಿಸಲಾಗುವುದು.

17) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸಿದ ಜನ್ಮ ದಿನಾಂಕ, ವಿದ್ಯಾರ್ಹತೆ, ಅನುಭವ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಆನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುದಿಲ್ಲ.

**9. ಕಡ್ಡಾಯವಾಗಿ ಲಗತ್ತಿಸಬೇಕಾದ/ಹಾಜರುಪಡಿಸಬೇಕಾದ ದೃಢೀಕರಣ ಪ್ರಮಾಣ ಪತ್ರಗಳು.**

ಅರ್ಜಿಯ ಜೊತೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾ ಪ್ರಮಾಣ ಪತ್ರಗಳ ಪ್ರತಿಗಳನ್ನು ಪ್ರತಿಯೊಂದು ಪುಟಕ್ಕೆ ಸ್ವಹಸ್ತಾಕ್ಷರದಿಂದ (Self Attestation) ದೃಢೀಕರಿಸಿ ಲಗತ್ತಿಸುವುದು.

1) ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಮೂರು ಭಾವ ಚಿತ್ರ (ಭಾವ ಚಿತ್ರದ ಹಿಂಭಾಗದಲ್ಲಿ ಅಭ್ಯರ್ಥಿ ಸಹಿ ಮಾಡಬೇಕು)
2) ಅರ್ಜಿ ಸಲ್ಲಿಸುವ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್‌ಗಳ/ವರ್ಷಗಳ ಪ್ರಮಾಣ ಪತ್ರಗಳ ಅಂಕಪಟ್ಟಿ ಪ್ರತಿಗಳು ಮತ್ತು ವಿದ್ಯಾರ್ಹತೆಯ ಪದವಿ ಪ್ರಮಾಣ ಪತ್ರ (ತೀರ ಇತ್ತೀಚಿನ ಪದವಿ ಆದಲ್ಲಿ ಮತ್ತು ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಲ್ಲಿ ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವ ಬಗ್ಗೆ ಅರ್ಜಿ ನಮೂನೆಯಲ್ಲಿ ನಮೂದಿಸತಕ್ಕದ್ದು.)
3) ವಯಸ್ಸಿನ ದೃಢೀಕರಣ ಕುರಿತು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ.
4) ಸೇವಾ ಅನುಭವ ಪ್ರಮಾಣ ಪತ್ರ.
5) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ವರ್ಗ–1, ಹಿಂದುಳಿದ ಜಾತಿ ಅಥವಾ ಪಂಗಡ (2ಎ, 2ಬಿ, 3ಎ ಮತ್ತು 3ಬಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.

ವಿ.ಸೂ.

ಅ) ಅಭ್ಯರ್ಥಿಗಳು ಅವರ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾ.ಯವಾಗಿ ಇಟ್ಟುಕೊಳ್ಳತಕ್ಕದ್ದು.

ಆ) ಸೇವಾ ಅನುಭವ ಪ್ರಮಾಣ ಪತ್ರ ಲಭ್ಯವಿಲ್ಲದಿದ್ದಲ್ಲಿ ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವ ಬಗ್ಗೆ ಅರ್ಜಿ ನಮೂನೆಯಲ್ಲಿ ನಮೂದಿಸತಕ್ಕದ್ದು.

ಇ) ಮೌಖಿಕ ಸಂದರ್ಶನಕ್ಕೆ ಅರ್ಹರಾದಲ್ಲಿ ಮೂಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹಾಜರುಪಡಿಸುವುದು.

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ

ಸ್ಥಳ : ಮಂಗಳೂರು

ಸಹಿ/–

ದಿನಾಂಕ : 11.03.2024

ಮಹಾಪ್ರಬಂಧಕರು (ಪ್ರ)

# ಅರ್ಜಿ ನಮೂನೆ

# The Mangalore Catholic Co-operative Bank Ltd

**Admin. Office**: M.C.C. Bank Building, Hampankatta,
Mangalore-575 001. Ph:0824-2445746
Email:hohrd@mccbank.in/ gm@mccbank.in, Website: www.mccbank.in

ESTD : 1912

ಅರ್ಜಿ ಸಲ್ಲಿಸುತ್ತಿರುವ ಹುದ್ದೆ ..........................................................................

ನೇಮಕಾತಿಗಾಗಿ ಅರ್ಜಿ ಆಹ್ವಾನ : ಪ್ರಕಟಣೆಯ ದಿನಾಂಕ 12.03.2024

ಇತ್ತೀಚಿನ ಭಾವಚಿತ್ರ

| | | |
|---|---|---|
| | ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ತಂದೆ/ಗಂಡನ ಹೆಸರು | |
| 3 ಎ) | ಜನ್ಮ ದಿನಾಂಕ | ದಿನಾಂಕ ☐☐ ತಿಂಗಳು ☐☐ ವರ್ಷ ☐☐☐☐ |
| ಬಿ) | ವಯಸ್ಸು (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಇದ್ದಂತೆ) | ☐ |
| 4 | ಲಿಂಗ ( ✓ನಮೂದಿಸಿ) | ಪುರುಷ ☐ ಸ್ತ್ರೀ ☐ |
| 5 | ಪೂರ್ಣ ಅಂಚೆ ವಿಳಾಸ (ಪತ್ರ ವ್ಯವಹಾರಕ್ಕಾಗಿ) | |
| 6 | ಖಾಯಂ ವಿಳಾಸ | |
| 7 | ದೂರವಾಣಿ ವಿವರಗಳು | ಸ್ಥಿರ ದೂರವಾಣಿ ಸಂಖ್ಯೆ :<br>ಮೊಬೈಲ್ ದೂರವಾಣಿ ಸಂಖ್ಯೆ : |
| 8 | ಇ-ಮೇಲ್ (ವಿದ್ಯುನ್ಮಾನ) ವಿಳಾಸ | |
| 9 | ರಾಷ್ಟ್ರೀಯತೆ | |
| 10 | ಧರ್ಮ/ವರ್ಗ | |
| 11 | ವೈವಾಹಿಕ ಸ್ಥಿತಿ | ವಿವಾಹಿತ/ತೆ ☐ ಅವಿವಾಹಿತ/ತೆ ☐ |

| 12 | ವಿದ್ಯಾರ್ಹತೆ (ಅರ್ಜಿ ದಿನಾಂಕಕ್ಕೆ ಅನುಗುಣವಾಗಿ) | | | | | |
|---|---|---|---|---|---|---|
| **ಕ್ರ.ಸಂ** | **ಉತ್ತೀರ್ಣವಾದ ಪರೀಕ್ಷೆಗಳು** | **ಮಂಡಳಿ/ ವಿಶ್ವವಿದ್ಯಾನಿಲಯದ ಹೆಸರು** | **ಪರೀಕ್ಷೆಗೆ ನಿಗದಿಪಡಿಸಿದ ಒಟ್ಟು ಅಂಕಗಳು** | **ಗಳಿಸಿದ ಅಂಕಗಳು** | **ಶೇಕಡಾವಾರು ಅಂಕಗಳು** | **ಉತ್ತೀರ್ಣವಾದ ವರ್ಷ** |
| i) | ಎಸ್.ಎಸ್.ಎಲ್.ಸಿ/ ತತ್ಸಮಾನ ವಿದ್ಯಾರ್ಹತೆ | | | | | |
| ii) | ಪದವಿಪೂರ್ವ (PUC) ವಾಣಿಜ್ಯ, ಕಲಾ, ವಿಜ್ಞಾನ, ಇತ್ಯಾದಿ | | | | | |
| iii) | ಪದವಿ (Degree) (B.Com, B.Sc, BA, etc) | | | | | |
| iv) | ತಾಂತ್ರಿಕ ಪದವಿ(Technical) | | | | | |
| v) | ಸ್ನಾತಕೋತ್ತರ ಪದವಿ (Post graduation) | | | | | |
| vi) | B.E. ಪದವಿ | | | | | |
| vii) | ಇತರೆ ವಿದ್ಯಾರ್ಹತೆ ಇದ್ದಲ್ಲಿ | | | | | |

☐ ಪದವಿ ಪ್ರಮಾಣ ಪತ್ರ ಲಗತ್ತಿಸಿದೆ ☐ ಪದವಿ ಪ್ರಮಾಣ ಪತ್ರ ಲಭವಿಲ್ಲದ್ದರಿಂದ ಸಂದರ್ಶನದ ಸಮಯದಲ್ಲಿ ಹಾಜರುಪಡಿಸುತ್ತೇನೆ.

| 13 | **ಹಿಂದಿನ ಸೇವಾ ಅನುಭವ ಇದ್ದಲ್ಲಿ** | | | |
|---|---|---|---|---|
| ಕ್ರ.ಸಂ | ಅವಧಿ | | ಸೇವೆ ಸಲ್ಲಿಸಿದ ಸಂಸ್ಥೆಯ ವಿವರಗಳು | ಕಾರ್ಯ ನಿರ್ವಹಿಸಿದ ಹುದ್ದೆ |
| | ಇಂದ | ವರೆಗೆ | | |
| i) | | | | |
| ii) | | | | |
| iii) | | | | |

☐ ಅನುಭವ ಪತ್ರ ಲಗತ್ತಿಸಿದೆ ☐ ಸಂದರ್ಶನದ ಸಮಯದಲ್ಲಿ ಹಾಜರುಪಡಿಸುತ್ತೇನೆ.

| 14 | ಪಾವತಿಸಿದ ಶುಲ್ಕದ ವಿವರ | ಡಿ.ಡಿ ಸಂಖ್ಯೆ………………..ದಿನಾಂಕ………………………..ರೂ…………………..ಡಿ.ಡಿ ಖರೀದಿಸಿದ ಬ್ಯಾಂಕ್ ಹೆಸರು ಮತ್ತು ವಿಳಾಸ ……………………………………………………………………………………… |
|---|---|---|

(ಮೇಲಿನ ಎಲ್ಲಾ ಕಾಲಂಗಳಲ್ಲಿ ನೀಡಲಾದ ಸ್ಥಳಾವಕಾಶ ಕಡಿಮೆ ಎಂದು ಕಂಡು ಬಂದಲ್ಲಿ ಅಭ್ಯರ್ಥಿಯು ಪ್ರತ್ಯೇಕ ಹಾಳೆಯಲ್ಲಿ ವಿವರಗಳನ್ನು ನಮೂದಿಸಿ ಅರ್ಜಿಯ ಜೊತೆಗೆ ಲಗತ್ತಿಸಬಹುದು)

**ಘೋಷಣೆ:** ಈ ಅರ್ಜಿಯಲ್ಲಿ ಇರುವ ವಿವರಗಳೆಲ್ಲವೂ ನನಗೆ ತಿಳಿದ ಮಟ್ಟಿಗೆ ಸರಿಯಾಗಿದ್ದು, ತಪ್ಪುಗಳಿದ್ದಲ್ಲಿ ನನ್ನ ಅರ್ಜಿಯನ್ನು ಯಾವುದೇ ಹಂತದಲ್ಲಿಯಾದರೂ ಸಹ ತಿರಸ್ಕರಿಸಿದಲ್ಲಿ ಅದಕ್ಕೆ ನಾನು ಬದ್ದನಾಗಿರುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಹಾಗೂ ನನಗೆ ಸಂಬಂಧಿಸಿದ ಯಾವುದೇ ವಾಸ್ತವ ಅಂಶಗಳನ್ನು ಮುಚ್ಚಿಡಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸಿದ್ದೇನೆಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ತಕ್ಷಣ ನಿರಾಕರಿಸಬಹುದು ಮತ್ತು ಸೇವೆಯಲ್ಲಿದ್ದಾಗ ನನ್ನ ಸೇವೆಯನ್ನು ಮುಕ್ತಾಯಗೊಳಿಸಬಹುದು ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಅರ್ಜಿದಾರನ/ಳ ಸಹಿ :

ದಿನಾಂಕ : ಹೆಸರು :




To get the latest jobs alert on your mobile

Please Join our WhatsApp group